# ನನ್ನ ಗುರುದೇವರ ಜೀವನ ಧ್ಯೇಯ

ಸ್ವಾಮಿ ವಿವೇಕಾನಂದ

ಇಂದು ಪ್ರಾಪಂಚಿಕ ಭಾವನೆಗಳ ಪ್ರಭಾವ ಮತ್ತು ಶಕ್ತಿಗಳು ಕೀರ್ತಿಯ ಅತ್ಯುನ್ನತ ಶಿಖರದಲ್ಲಿರುವಾಗ, ಮಾನವನ ಬಾಹ್ಯ ಜಗತ್ತಿನ ಮೇಲಿರುವ ಅವಲಂಬನೆ ಹೆಚ್ಚಾಗಿ ಆತನು ಕೇವಲ ಹಣವನ್ನು ಉತ್ಪಾದಿಸುವ ಒಂದು ಯಂತ್ರವಾಗುವ ಅಧೋಗತಿಗೆ ಇಳಿದಿದ್ದಾನೆ ಮತ್ತು ತನ್ನ ದೈವಿಕ ಸ್ವಭಾವವನ್ನು ಮರೆಯುವ ಸ್ಥಿತಿಯಲ್ಲಿ ಇದ್ದಾನೆ. ಈಗ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಒಂದು ವ್ಯವಸ್ಥೆ ಆವಶ್ಯಕವಾಗಿದೆ. ಈಗ ಧ್ವನಿಯೊಂದು ಕೇಳಿ ಬರುತ್ತಿದೆ. ಮುತ್ತುತ್ತಿರುವ ಜಡವಾದವೆಂಬ ಮುಗಿಲ ತಂಡವನ್ನು ಚದುರಿಸುವ ಶಕ್ತಿಯೊಂದು ಉದಯಿಸಿದೆ. ಅದು ಚಲಿಸುತ್ತಿದೆ. ಅದು ಪುನಃ ಮಾನವಕೋಟಿಗೆ ತನ್ನ ನೈಜ ಸ್ವಭಾವವನ್ನು ತೋರುವ ಸಮಯ ಸನ್ನಿಹಿತವಾಗಿದೆ. ಪುನಃ ಈ ಶಕ್ತಿಯ ಕೇಂದ್ರ ಏಷ್ಯಾ ಖಂಡವಾಗುವುದು.

ಭರತಖಂಡದಲ್ಲಿ ಅಂತಹ ಆಧ್ಯಾತ್ಮಿಕ ತರಂಗವನ್ನು ಚಾಲನೆಗೊಳಿಸಿದ ಒಬ್ಬ ವ್ಯಕ್ತಿಯ ಜೀವನವನ್ನು ನಿಮಗೆ ನಿರೂಪಿಸುತ್ತೇನೆ. ಈ ಮಹಾನುಭಾವರು ನಮ್ಮ ದೇಶದಲ್ಲಿ ಅತಿ ಮುಖ್ಯ ವಿಶ್ವವಿದ್ಯಾನಿಲಯವಿರುವ ಭರತಖಂಡದ ರಾಜಧಾನಿಯಾದ ಕಲ್ಕತ್ತೆಯ ಸಮೀಪದಲ್ಲಿ ವಾಸಿಸುತ್ತಿದ್ದರು. ಈ ವಿಶ್ವವಿದ್ಯಾನಿಲಯ ವರ್ಷಂಪ್ರತಿ ನೂರಾರು ಜನ ಸಂಶಯವಾದಿಗಳು, ಜಡವಾದಿಗಳನ್ನು ಹೊರಗೆ ಕಳುಹಿಸುತ್ತಿತ್ತು. ವಿಶ್ವವಿದ್ಯಾನಿಲಯದ ಹಲವು ಸಂಶಯವಾದಿಗಳೂ, ಜಡವಾದಿಗಳೂ ಇವರ ಮಾತನ್ನು ಕೇಳಲು ಬರುತ್ತಿದ್ದರು. ನಾನೂ ಇವರ ವಿಷಯವನ್ನು ತಿಳಿದು ಇವರ ಮಾತನ್ನು ಕೇಳಲು ಹೋದೆ. ಯಾವ ಒಂದು ವಿಶೇಷವೂ ಇಲ್ಲದೆ ಸಾಧಾರಣ ಮಾನವರಂತೆ ಇವರು ಕಂಡರು. ಅವರ ಭಾಷೆ ಅತಿ ಸರಳವಾಗಿತ್ತು. "ಇವರು ಮಹಾಗುರುಗಳೇ!" ಎಂದು ನಾನು ಯೋಚಿಸಿ, ಅವರ ಸಮೀಪಕ್ಕೆ ಹೋಗಿ ನಾನು ಜೀವನದಲ್ಲಿ ಎಲ್ಲರನ್ನೂ ಕೇಳುತ್ತಿದ್ದ ಪ್ರಶ್ನೆಯನ್ನೇ ಹಾಕಿದೆ: "ಮಹಾಶಯರೆ, ನೀವು ದೇವರನ್ನು ನಂಬುವಿರಾ?" ಎಂದೆ. "ಹೌದು" ಎಂದರು ಅವರು. "ನೀವು ಅದನ್ನು ಸಮರ್ಥಿಸಬಲ್ಲಿರಾ?" ಎಂದೆ. "ಹೌದು" ಎಂದರು. "ಹೇಗೆ?" ಎಂದೆ. "ಏಕೆಂದರೆ, ನಾನು ನಿನ್ನನ್ನು ಇಲ್ಲಿ ಹೇಗೆ ನೋಡುತ್ತಿರುವೆನೋ ಹಾಗೇ ದೇವರನ್ನೂ ನೋಡುವೆ, ಆದರೆ ಇದಕ್ಕಿಂತ ಹೆಚ್ಚು ಸತ್ಯವಾಗಿ" ಎಂದರು. ಇದು ನನ್ನನ್ನು ತಕ್ಷಣವೇ ಆಕರ್ಷಿಸಿತು. "ನಾನು ದೇವರನ್ನು ನೋಡಿರುವೆನು; ನಾವು ಪ್ರಪಂಚವನ್ನು ನೋಡುವುದಕ್ಕಿಂತ ಅತಿಶಯವಾಗಿ ಧರ್ಮದ ಸತ್ಯಗಳನ್ನು ನೋಡಬಹುದು, ಅನುಭವಿಸಬಹುದು" ಎಂದು ಧೈರ್ಯವಾಗಿ ಹೇಳಬಲ್ಲ ವ್ಯಕ್ತಿಯನ್ನು ನಾನು ಜೀವನದಲ್ಲಿ ಪ್ರಥಮ ಬಾರಿ ಕಂಡೆ. ಪ್ರತಿದಿನವೂ ಅವರ ಬಳಿಗೆ ಹೋಗಲು ಆರಂಭಿಸಿದೆ. ಅಧ್ಯಾತ್ಮವನ್ನು ವಾಸ್ತವವಾಗಿ ಕೊಡಬಹುದು ಎಂಬುದನ್ನು ಸತ್ಯವಾಗಿ ಕಂಡೆ. ಅವರ ಒಂದು ಸ್ಪರ್ಶ, ಒಂದು ಕುಡಿನೋಟ, ಇಡೀ ಜೀವನವನ್ನೇ ಬದಲಾಯಿಸಬಲ್ಲದು. ಹಿಂದಿನ ಕಾಲದ ಆಧ್ಯಾತ್ಮಿಕ ಮಹಾನುಭಾವರಾದ ಕ್ರಿಸ್ತ, ಬುದ್ಧ ಮಹಮ್ಮದರು ಮಾನವನಿಗೆ, "ನೀನು ಪೂರ್ಣನಾಗು" ಎಂದು ಹೇಳಿದೊಡನೆ ಮನುಷ್ಯನು ಪೂರ್ಣನಾಗುವನು ಎಂಬುದನ್ನು ಕೇಳಿದ್ದೆ. ಅದು ಈಗ ಸತ್ಯವೆಂದು ತಿಳಿದೆ. ಈ ವ್ಯಕ್ತಿಯನ್ನು ನೋಡಿದ ಮೇಲೆ ನನ್ನ ಅನುಮಾನವೆಲ್ಲ ಬಗೆಹರಿಯಿತು. ಇದನ್ನು ಮಾಡಬಹುದು ಎಂದು ಅರಿತೆ.

ಸ್ವಾಮಿ ವಿವೇಕಾನಂದರಿಗೆ ತಮ್ಮ ಗುರುದೇವರ ಮೇಲೆ ಅಸದಳ ಗೌರವ ಮತ್ತು ಭಕ್ತಿ. ಶ್ರೀರಾಮಕೃಷ್ಣರ ಅವತಾರ ಕಾರ್ಯದ ವೈಶಿಷ್ಟ್ಯತೆಯನ್ನು ಪರಿಪೂರ್ಣವಾಗಿ ಗುರುತಿಸಿದವರು ಅವರು. ಅವರು ಅಮೆರಿಕದಲ್ಲಿ ಮಾಡಿದ ಎರಡು ಪ್ರವಚನಗಳನ್ನು 'ನನ್ನ ಗುರುದೇವ' ಎಂಬ ಶೀರ್ಷಿಕೆಯಲ್ಲಿ ಸಂಕಲನ ಮಾಡಲಾಗಿದೆ. ಅದರ ಉದ್ಧೃತ ಭಾಗ ಇದು.

ನಾನು ಗುರುದೇವನಿಂದ ಕಲಿತ ಬಹುಶಃ ಅತ್ಯಂತ ಮುಖ್ಯವಾದ ಎರಡನೆಯ ಭಾವನೆಯೆ ಇದು: ಜಗತ್ತಿನ ಧರ್ಮಗಳು ಪರಸ್ಪರ ವಿರೋಧವಲ್ಲ. ಅವೆಲ್ಲ ಒಂದು ಸನಾತನ ಧರ್ಮದ ಹಲವಾರು ಪ್ರತಿಬಿಂಬಗಳು. ಆ ಒಂದು ಸತ್ಯವನ್ನೇ ಕಾರ್ಯಕ್ಷೇತ್ರದ ಹಲವು ಭೂಮಿಕೆಗಳಲ್ಲಿ ಬೇರೆ ಬೇರೆ ಜನಾಂಗದವರಿಗೆ ಅವರವರ ಮನಸ್ಸಿಗೆ ರುಚಿಸುವಂತೆ ಉಪಯೋಗಿಸಿದೆ. ಎಂದಿಗೂ ನನ್ನ ಧರ್ಮ ಅಥವಾ ನಿಮ್ಮ ಧರ್ಮ ಎಂಬುದು ಇರಲಿಲ್ಲ. ನನ್ನ ರಾಷ್ಟ್ರೀಯ ಧರ್ಮ ಅಥವಾ ನಿಮ್ಮ ರಾಷ್ಟ್ರೀಯ ಧರ್ಮ ಎಂಬುದೂ ಇರಲಿಲ್ಲ. 'ಹಲವು' ಧರ್ಮಗಳು ಎಂದಿಗೂ ಇರಲಿಲ್ಲ. ಯಾವಾಗಲೂ ಇದ್ದುದು ಒಂದೇ ಧರ್ಮ. ಒಂದು ಸನಾತನ ಧರ್ಮ ಅನಾದಿಕಾಲದಿಂದಲೂ ಬಂದಿದೆ. ಅದೇ ಎಂದೆಂದಿಗೂ ಇರುವುದು. ಈ ಧರ್ಮವೇ ಹಲವು ದೇಶಗಳಲ್ಲಿ ಹಲವು ರೀತಿಗಳಲ್ಲಿ ವ್ಯಕ್ತವಾಗುತ್ತ ಹೋಗುವುದು. ಆದಕಾರಣ ನಾವು ಎಲ್ಲಾ ಧರ್ಮಗಳಿಗೂ ಗೌರವವನ್ನು ತೋರಬೇಕು. ಸಾಧ್ಯವಾದ ಮಟ್ಟಿಗೆ ನಾವು ಎಲ್ಲವನ್ನೂ ಸ್ವೀಕರಿಸಬೇಕು. ಧರ್ಮಗಳು ಜನಾಂಗ ಅಥವಾ ಭೌಗೋಳಿಕ ಸ್ಥಿತಿಗತಿಗಳಿಗೆ ಅನುಗುಣ ಮಾತ್ರವಲ್ಲದೆ, ವ್ಯಕ್ತಿಯ ಶಕ್ತಿಗೆ ಅನುಗುಣವಾಗಿಯೂ ಅಭಿವ್ಯಕ್ತಿಗೊಳ್ಳುತ್ತವೆ. ಒಬ್ಬನಲ್ಲಿ ಧರ್ಮವು ಪ್ರಚಂಡ ಕ್ರಿಯಾರೂಪದಲ್ಲಿ ವ್ಯಕ್ತವಾಗುತ್ತದೆ. ಮತ್ತೊಬ್ಬನಲ್ಲಿ ಭಕ್ತಿಯಂತೆ, ಮಗದೊಬ್ಬನಲ್ಲಿ

**ರಾಷ್ಟ್ರಕ್ಕೆ ಅತ್ಯಂತ ಅವಶ್ಯಕವಾಗಿರುವ ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಈ ಯುಗದಲ್ಲಿ ಸ್ವಾತಂತ್ರ್ಯೋದಯಕ್ಕೆ ಬಹು ಪೂರ್ವದಲ್ಲಿಯೇ ಸ್ಪಷ್ಟವಾಗಿ, ಅನುಭವಪೂರ್ವಕವಾಗಿ, ಸರ್ವಜನಸುಲಭ ಗ್ರಾಹ್ಯವಾಗಿ, ಪ್ರಭಾವಯುತವಾಗಿ, ಕ್ರಾಂತಿ ಪೂರ್ಣವಾದರೂ ಸಂಪ್ರದಾಯ ಅವಿರುದ್ಧವೆಂಬಂತೆ ಲೋಕ ಸಮಸ್ತಕ್ಕೂ ಸಾರಿದವರೆಂದರೆ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು. –ಕುವೆಂಪು**

ಯೋಗದಂತೆ ಇನ್ನೂ ಒಬ್ಬನಲ್ಲಿ ಜ್ಞಾನದಂತೆ ವ್ಯಕ್ತವಾಗುತ್ತದೆ. ನಾವು ಮತ್ತೊಬ್ಬರಿಗೆ ನಿಮ್ಮ ಮಾರ್ಗ ಸರಿಯಲ್ಲವೆಂದು ಹೇಳುವುದು ತಪ್ಪು. ಬಹುಶಃ ಭಾವಜೀವಿಯಾದವನೊಬ್ಬನು, ಇತರರಿಗೆ ಒಳ್ಳೆಯದನ್ನು ಮಾಡುವವನ ದಾರಿಯು ಧರ್ಮಕ್ಕೆ ಸೂಕ್ತವಾದ ಮಾರ್ಗವಲ್ಲ ಎಂದು ಭಾವಿಸಬಹುದು. ಏಕೆಂದರೆ ಅದು ತನ್ನ ರೀತಿಯಲ್ಲ, ಆದಕಾರಣ ತಪ್ಪು. "ಈಶ್ವರ ಪ್ರೇಮ ಸ್ವರೂಪ, ಅವನನ್ನು ಪ್ರೀತಿಸುವುದು ಎಂದರೆ ಈ ಮೂಢರಿಗೆ ಏನು ಗೊತ್ತಿದೆ" ಎಂದು ತತ್ತ್ವಜ್ಞಾನಿಯು ಭಾವಿಸಿದರೆ ಅದು ತಪ್ಪು.

ಮಾನವನು ಈ ದೇಹದಲ್ಲಿರುವಾಗಲೇ ಪೂರ್ಣನಾಗಬಲ್ಲ ಎಂಬುದನ್ನು ನಾನು ನನ್ನ ಗುರುವಿನ ಸಾನ್ನಿಧ್ಯದಲ್ಲಿ ಕಲಿತೆನು. ಅವರ ಬಾಯಿ ಯಾರನ್ನೂ ಶಪಿಸಲಿಲ್ಲ, ಟೀಕಿಸಲೂ ಇಲ್ಲ. ಅವರ ಕಣ್ಣು ಪಾಪವನ್ನು ಲವಲೇಶವಾದರೂ ನೋಡುವ ಸ್ಥಿತಿಯಲ್ಲಿರ ಲಿಲ್ಲ. ಹೀನ ಆಲೋಚನೆ ಮಾಡುವುದಕ್ಕೆ ಅವರಿಂದ ಸಾಧ್ಯವೇ ಇರಲಿಲ್ಲ. ಅವರ ಮನಸ್ಸು ಶುಭವನ್ನಲ್ಲದೆ ಬೇರೆ ಏನನ್ನೂ ನೋಡುತ್ತಿರಲಿಲ್ಲ. ಆ ಮಹಾನ್ ಪವಿತ್ರತೆ ಮತ್ತು ಅಸಾಧಾರಣ ತ್ಯಾಗ ಇವೇ ಅಧ್ಯಾತ್ಮ ಜೀವನದ ರಹಸ್ಯ. "ಐಶ್ವರ್ಯದ ಮೂಲಕವಾಗಿ ಅಲ್ಲ, ಸಂತತಿಯ ಮೂಲಕವಾಗಿ ಅಲ್ಲ, ತ್ಯಾಗದ ಮೂಲಕ ಮಾತ್ರ ಮೋಕ್ಷವನ್ನು ಪಡೆಯಬಹುದು" ಎಂದು ವೇದಗಳು ಸಾರುತ್ತವೆ. "ನಿನ್ನಲ್ಲಿರುವುದನ್ನೆಲ್ಲ ಮಾರಿ ದೀನರಿಗೆ ಕೊಟ್ಟು ನನ್ನನ್ನು ಅನುಸರಿಸು" ಎನ್ನುವನು ಕ್ರಿಸ್ತ. ಎಲ್ಲಾ ಮಹಾತ್ಮರೂ, ದೇವದೂತರೂ ಇದನ್ನೇ ಹೇಳಿರುವರು, ಇದನ್ನೇ ಅನುಷ್ಠಾನ ಮಾಡಿರುವರು. ಅಂತಹ ಪ್ರಚಂಡ ತ್ಯಾಗವಿಲ್ಲದೆ ಮಹಾನ್ ಆಧ್ಯಾತ್ಮಿಕತೆ ಬರುವುದು ಹೇಗೆ? ಆಧ್ಯಾತ್ಮಿಕ ಭಾವನೆಗಳು ಎಲ್ಲಿದ್ದರೂ ತ್ಯಾಗವೇ ಅವುಗಳ ಹಿನ್ನೆಲೆಯಾಗಿರುವುದು. ಈ ತ್ಯಾಗಭಾವನೆ ಎಷ್ಟು ಕುಗ್ಗುತ್ತ ಹೋದರೆ ಧಾರ್ಮಿಕ ಭಾವನೆ ಅಷ್ಟು ಕಡಮೆಯಾಗಿ ಪ್ರಾಪಂಚಿಕ ವಿಷಯಗಳು ಬಂದು ನೆಲೆಸು ವುದು ಕಾಣುತ್ತದೆ.

ತ್ಯಾಗಮೂರ್ತಿಯಾಗಿದ್ದರು ಆ ಮಹಾನುಭಾವರು. ಸಂನ್ಯಾಸಿ ಯಾದರೆ ಪ್ರಾಪಂಚಿಕ ದ್ರವ್ಯವನ್ನು ಮತ್ತು ಪದವಿಗಳನ್ನು ತ್ಯಜಿಸು ವುದು ನಮ್ಮ ದೇಶದಲ್ಲಿ ರೂಢಿ. ನನ್ನ ಗುರುದೇವ ಅಕ್ಷರಶಃ ಇದನ್ನು ಪಾಲಿಸಿದರು. ತಮ್ಮಿಂದ ಯಾವುದಾದರೊಂದು ಕಾಣಿಕೆ ಯನ್ನು ಅವರು ಸ್ವೀಕರಿಸಿದರೆ ತಾವು ಧನ್ಯರೆಂದು ಎಷ್ಟೋ ಜನ ಭಾವಿಸಿದ್ದರು. ಅವರು ಸ್ವೀಕರಿಸುವುದಾದರೆ ಸಹಸ್ರಾರು ರೂಪಾಯಿಗಳನ್ನು ಸಂತೋಷದಿಂದ ಕೊಡಲು ಸಿದ್ಧರಾಗಿದ್ದರು. ಆದರೆ ಮೊದಲು ಇಂತಹವರಿಂದ ದೂರವಿರಲು ಅವರು ಯತ್ನಿಸಿದರು. ಕಾಮಕಾಂಚನಗಳ ತ್ಯಾಗದಲ್ಲಿ ಸಂಪೂರ್ಣ ವಿಜಯಿಯಾದ ಬದುಕಿನ ಉದಾಹರಣೆ ಅವರ ಜೀವನ. ಈ ಭಾವನೆಗಳನ್ನೆಲ್ಲ ಅವರು ಮೀರಿಹೋಗಿದ್ದರು. ಈ ಶತಮಾನಕ್ಕೆ ಅಂತಹ ವ್ಯಕ್ತಿಗಳು ಅತ್ಯಾವಶ್ಯಕ. ಜೀವನದ ಅತ್ಯಾವಶ್ಯಕ ವಸ್ತುಗಳು ಇಲ್ಲದೆ (ಈಗ ಅವು ಪ್ರತಿದಿನವೂ ಎಲ್ಲ ಪ್ರಮಾಣವನ್ನೂ ಮೀರಿ ಹೆಚ್ಚುತ್ತಿವೆ) ತಾವು ಒಂದು ತಿಂಗಳೂ ಇರಲಾರೆವೆಂದು ಭಾವಿಸುವಾಗ, ಈ ಮಹಾತ್ಯಾಗ ಅತಿಮುಖ್ಯ. ಇಂತಹ ಕಾಲದಲ್ಲಿ ಸಂದೇಹವಾದಿಗಳಾದ ಜನರೆದುರಿಗೆ, ಪ್ರಪಂಚದ ಐಶ್ವರ್ಯ ಕೀರ್ತಿಗಳಾವುದನ್ನೂ ಗಮನಕ್ಕೆ ತಾರದೆ ಇರುವುದು ಸಾಧ್ಯವೆಂದು ಎದ್ದು ತೋರುವುದು ಅವಶ್ಯಕ. ಇಂತಹ ವ್ಯಕ್ತಿಗಳು ಜಗತ್ತಿನಲ್ಲಿ ಇನ್ನೂ ಇರುವರು.

ನನ್ನ ಗುರುದೇವರ ಜೀವನದ ಮತ್ತೊಂದು ಮುಖ, ಅವರಿಗೆ ಮಾನವಕೋಟಿಯಲ್ಲಿ ಇದ್ದ ಅಪಾರ ಪ್ರೇಮ. ಅವರ ಜೀವನದ ಅರ್ಧ ಭಾಗ ಅಧ್ಯಾತ್ಮ ಶಕ್ತಿಯನ್ನು ಶೇಖರಿಸುವುದರಲ್ಲಿ ಕಳೆಯಿತು. ಉಳಿದ ಆಯುಷ್ಯವನ್ನು ಅದನ್ನು ಹಂಚುವುದರಲ್ಲಿ ಕಳೆದರು. ನಮ್ಮ ದೇಶದಲ್ಲಿ ಆಧ್ಯಾತ್ಮಿಕ ಗುರು ಅಥವಾ ಸಂನ್ಯಾಸಿಯ ದರ್ಶನ ಪಡೆಯಬೇಕಾದರೆ, ನಿಮ್ಮ ದೇಶದಲ್ಲಿ ಯಾವ ರೂಢಿ ಇದೆಯೋ ಅದಿಲ್ಲ. ಯಾವುದೋ ಒಂದು ವಿಷಯವನ್ನು ಕೇಳುವುದಕ್ಕೆ ಒಬ್ಬರು ಬರುವರು. ಒಂದು ಪ್ರಶ್ನೆಯನ್ನು ಅವರಿಗೆ ಹಾಕಲು, ಅವರಿಂದ ಒಂದು ನುಡಿಯನ್ನು ಕೇಳಲು, ನೂರಾರು ಮೈಲಿಗಳಿಂದ ನಡೆದು ಬರುವರು. "ನನ್ನ ಮುಕ್ತಿಗೆ ಒಂದು ಮಾತನ್ನು ಹೇಳಿ" ಎನ್ನುವರು. ಅವರು ಬರುತ್ತಿದ್ದ ಬಗೆ ಹೀಗೆ: ಜನರು ಸಾಮಾನ್ಯವಾಗಿ ಇವರ ಸ್ಥಳಕ್ಕೆ ಗುಂಪುಗುಂಪಾಗಿ ನಿಸ್ಸಂಕೋಚವಾಗಿ ಬರುತ್ತಿದ್ದರು. ಅವರನ್ನು ಒಂದು ಮರದ ಕೆಳಗೆ ಕಾಣಬಹುದು; ಅಲ್ಲೆ ಪ್ರಶ್ನೆ ಹಾಕುವರು. ಒಂದು ಗುಂಪಿನ ಜನರು ಹೋಗುವುದೇ ತಡ, ಇನ್ನೊಂದು ಗುಂಪು ಬರುವುದು, ಒಬ್ಬ ಅತಿ ಹೆಚ್ಚಿನ ಗೌರವಕ್ಕೆ ಪಾತ್ರನಾದರೆ ಅಂಥವನಿಗೆ ಕೆಲವು ವೇಳೆ ಹಗಲು ರಾತ್ರಿ ವಿಶ್ರಾಂತಿಯೇ ಸಿಕ್ಕುವುದಿಲ್ಲ. ಒಂದೇ ಸಮನಾಗಿ ಮಾತನಾಡಬೇಕು. ಹಲವು ಗಂಟೆಗಳವರೆಗೆ ಜನ ಸಂದಣಿ ಬರುವುದು, ಇವನು ಅವರಿಗೆ ಉಪದೇಶ ಮಾಡುವನು.

ಇವರ ವಾಣಿಯನ್ನು ಕೇಳುವುದಕ್ಕೆ ಗುಂಪುಗುಂಪಾಗಿ ಜನರು ಬರಲು ಮೊದಲಾಯಿತು. ದಿನದ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಇಪ್ಪತ್ತು ಗಂಟೆ ಅವರು ಮಾತನಾಡುತ್ತಿದ್ದರು. ಅದೂ ಒಂದು ದಿನವಲ್ಲ, ಹಲವಾರು ತಿಂಗಳುಗಳವರೆಗೆ. ಪ್ರಚಂಡ ದುಡಿತಕ್ಕೆ ಈಡಾಗಿ ಕೊನೆಗೆ ಅವರ ದೇಹ ಜರ್ಝರಿತವಾಯಿತು. ಅವರಿಗೆ ಮಾನವಕೋಟಿಯ ಮೇಲೆ ಅಭೂತಪೂರ್ವ ಅನುಕಂಪವಿತ್ತು. ಇವರ ಸಹಾಯವನ್ನು ಅಪೇಕ್ಷಿಸಿದ ಸಹಸ್ರಾರು ಜನರಲ್ಲಿ ಒಬ್ಬ

ದೀನನನ್ನೂ ನಿರಾಕರಿಸಲಿಲ್ಲ. ಕ್ರಮೇಣ ಗಂಟಲಿನ ರೋಗ ಪ್ರಾಪ್ತವಾಯಿತು. ಆದರೂ 'ತೊಂದರೆಗೆ ಒಳಗಾಗಬೇಡಿ' ಎಂದು ಹೇಳಿ ಅವರನ್ನು ಸುಮ್ಮನಿರಿಸಲು ಆಗಲಿಲ್ಲ. ಜನರು ತಮ್ಮ ದರ್ಶನಲಾಭವನ್ನು ಇಚ್ಛಿಸುತ್ತಿರುವರು ಎಂದು ಕೇಳಿದೊಡನೆಯೆ ಅವರನ್ನು ಒಳಗೆ ಬಿಡಬೇಕೆಂದು ಬಲಾತ್ಕಾರ ಮಾಡಿ ಅವರ ಸಂದೇಹವನ್ನೆಲ್ಲಾ ನಿವಾರಿಸುತ್ತಿದ್ದರು. ಅವರನ್ನು ಎಚ್ಚರಿಸಿದಾಗ ಹೀಗೆ ಹೇಳುವರು: "ನಾನು ಇದನ್ನು ಲೆಕ್ಕಿಸುವುದಿಲ್ಲ. ಇಂಥ ಇಪ್ಪತ್ತು ಸಹಸ್ರ ದೇಹಗಳನ್ನು ಬೇಕಾದರೂ, ಒಬ್ಬನಿಗೆ ಸಹಾಯ ಮಾಡಲು, ನಾನು ಬಿಡಲು ಸಿದ್ಧನಾಗಿದ್ದೇನೆ. ಒಬ್ಬ ಮಾನವನಿಗೆ ಸಹಾಯ ಮಾಡುವುದೇ ಮಹಾಪುಣ್ಯ." ಅವರಿಗೆ ವಿಶ್ರಾಂತಿಯೇ ಇರಲಿಲ್ಲ. ಒಂದು ದಿನ ಒಬ್ಬರು, "ಸ್ವಾಮಿ, ನೀವು ಮಹಾಯೋಗಿಗಳು, ನಿಮ್ಮ ದೇಹದ ಮೇಲೆ ಮನಸ್ಸನ್ನು ಸ್ವಲ್ಪ ತಿರುಗಿಸಿ ರೋಗವನ್ನು ಏತಕ್ಕೆ ಗುಣಮಾಡಿಕೊಳ್ಳಬಾರದು?" ಎಂದು ಕೇಳಿದರು. ಮೊದಲು ಅವರು ಉತ್ತರಕೊಡಲಿಲ್ಲ. ಪುನಃ ಪ್ರಶ್ನೆಯನ್ನು ಹಾಕಿದ ಮೇಲೆ, "ಗೆಳೆಯಾ, ನೀನೊಬ್ಬ ಜ್ಞಾನಿ ಎಂದು ಭಾವಿಸಿದ್ದೆ. ಆದರೆ ಇತರ ಪ್ರಾಪಂಚಿಕರಂತೆಯೇ ನೀನೂ ಮಾತನಾಡುವೆ. ಭಗವಂತನಿಗೆ ಈ ಮನಸ್ಸನ್ನು ಸಮರ್ಪಿಸಿದ್ದೇನೆ. ನಾನು ಇದನ್ನು ಪುನಃ ಹಿಂತಿರುಗಿಸಿ ಕೇವಲ ಆತ್ಮದ ಒಂದು ಗೂಡಿನಂತೆ ಇರುವ ದೇಹದ ಮೇಲೆ ಇಡು ಎನ್ನುವೆಯಾ?" ಎಂದರು.

ಅವರ ಭಾವನೆ ಮತ್ತು ಸಂದೇಶ, ಇವನ್ನು ವಿವರಿಸುವುದಕ್ಕೆ ಅರ್ಹರಾದ ಎಲ್ಲೋ ಕೆಲವರಿಗೆ ಮಾತ್ರ ತಿಳಿದಿದ್ದಿತು. ಪ್ರಪಂಚವನ್ನು ತೊರೆದು ಅವರ ಕಾರ್ಯವನ್ನು ಮಾಡಲು ಬದ್ಧಕಂಕಣರಾದ ಕೆಲವು ಬಾಲಕರನ್ನು ಅವರು ಹಿಂದೆ ಬಿಟ್ಟಿದ್ದರು. ಅವರನ್ನು ಅಡಗಿಸಲು ಜನರು ಪ್ರಯತ್ನಪಟ್ಟರು. ಆದರೆ ಆ ಮಹಾನುಭಾವನ ಜೀವನಸ್ಫೂರ್ತಿಯಿಂದ ಅವರು ಅಚಲರಾಗಿ ನಿಂತರು. ಆ ಪುಣ್ಯಾತ್ಮನ ಹಲವು ವರ್ಷಗಳ ಸಂಗವಶದಿಂದ ತಮ್ಮ ಆದರ್ಶವನ್ನು ಅವರು ತೊರೆಯಲಿಲ್ಲ. ಸಂನ್ಯಾಸಿಗಳಾಗಿದ್ದ ಈ ತರುಣರಲ್ಲಿ, ಕೆಲವರು ಶ್ರೀಮಂತರ ಕುಲದಲ್ಲಿ ಹುಟ್ಟಿದ್ದರೂ, ತಾವು ಹುಟ್ಟಿದ ಊರಿನಲ್ಲಿ ಭಿಕ್ಷೆ ಬೇಡಿದರು. ಮೊದಲು ಅವರು ಅತ್ಯಂತ ವಿರೋಧವನ್ನು ಎದುರಿಸಬೇಕಾಗಿತ್ತು. ಆದರೂ ಅವರು ಛಲದಿಂದ ಆದರ್ಶವನ್ನು ತೊರೆಯದೆ ದಿನ ಕಳೆದಂತೆ ಆ ಮಹಾತ್ಮನ ಸಂದೇಶದಿಂದ ಇಡೀ ದೇಶವೆಲ್ಲ ಅನುರಣಿತವಾಗುವಂತೆ ಭರತಖಂಡದಲ್ಲೆಲ್ಲ ಉಪದೇಶವನ್ನು ಹರಡುತ್ತ ಹೋದರು. ಎಲ್ಲೋ ಬಂಗಾಳದ ದೂರದ ಹಳ್ಳಿಯಲ್ಲಿದ್ದು, ಯಾವ ವಿದ್ಯಾಭ್ಯಾಸವೂ ಇಲ್ಲದೆ, ತಮ್ಮ ಸ್ವಂತ ಇಚ್ಛಾಶಕ್ತಿಯ ಛಲದಿಂದ ಸತ್ಯಸಾಕ್ಷಾತ್ಕಾರವನ್ನು ಮಾಡಿಕೊಂಡು, ಅದನ್ನು ಸಜೀವವಾಗಿಟ್ಟಿರುವುದಕ್ಕೆ ಕೆಲವು ಶಿಷ್ಯರನ್ನು ಬಿಟ್ಟು, ಎಲ್ಲರಿಗೂ ಅದನ್ನು ಹರಡಿದರು, ಆ ಮಹಾನುಭಾವರು.

ಇಂದು ಭರತಖಂಡದಲ್ಲಿರುವ ಲಕ್ಷಾಂತರ ಜನರು ಶ್ರೀರಾಮಕೃಷ್ಣ ಪರಮಹಂಸರ ಹೆಸರನ್ನು ಕೇಳಿರುವರು. ಅದು ಮಾತ್ರವಲ್ಲ ಅವರ ಶಕ್ತಿ ಮತ್ತು ಪ್ರಭಾವ ಭರತಖಂಡವನ್ನು ಮೀರಿ ಹಬ್ಬಿರುವುದು. ಪ್ರಪಂಚದಲ್ಲಿ ಎಲ್ಲಿಯಾದರೂ ನಾನು ಒಂದು ಸತ್ಯವನ್ನು ಹೇಳಿದ್ದರೆ, ಆಧ್ಯಾತ್ಮಿಕ ಭಾವವನ್ನು ಬೀರಿದ್ದರೆ, ಅದು ನನ್ನ ಗುರುವಿನ ಪ್ರಭಾವ, ತಪ್ಪುಗಳು ಮಾತ್ರ ನನ್ನವು.

ಆಧುನಿಕ ಪ್ರಪಂಚಕ್ಕೆ ಶ್ರೀರಾಮಕೃಷ್ಣರ ಸಂದೇಶವಿದು: **"ಸಿದ್ಧಾಂತಗಳನ್ನು ಲೆಕ್ಕಿಸಬೇಡಿ. ಮೂಢ ನಂಬಿಕೆಗಳನ್ನು ಲೆಕ್ಕಿಸಬೇಡಿ, ಕೋಮು, ಚರ್ಚು, ದೇವಸ್ಥಾನ ಇವುಗಳನ್ನು ಲೆಕ್ಕಿಸಬೇಡಿ. ಪ್ರತಿಯೊಬ್ಬ ಮಾನವನ ಜೀವನದ ಸಾರವಾದ ಅಧ್ಯಾತ್ಮದೊಂದಿಗೆ ಇವನ್ನು ಹೋಲಿಸಿದರೆ ಇವಕ್ಕೆ ಬೆಲೆಯಿಲ್ಲ. ಮನುಷ್ಯನಲ್ಲಿ ಇದು ಹೆಚ್ಚು ವಿಶದವಾಗಿ ಸ್ಪಷ್ಟವಾಗಿ ತೋರಿದಷ್ಟೂ ಸತ್ಕಾರ್ಯ ಸಾಧನೆಗೆ ಅವನು ಮಹಾ ಶಕ್ತಿಯಾಗುವನು. ಮೊದಲು ಅದನ್ನು ಸಂಪಾದಿಸಿ, ಸಾಧಿಸಿ, ಯಾರನ್ನೂ ದೂರಬೇಡಿ. ಎಲ್ಲಾ ಸಿದ್ಧಾಂತಗಳಲ್ಲೂ ಪಂಥಗಳಲ್ಲೂ ಸ್ವಲ್ಪ ಸತ್ಯವಿದೆ. ಧರ್ಮವೆಂದರೆ ಮಾತಲ್ಲ, ಹೆಸರಲ್ಲ, ಪಂಥವಲ್ಲ; ಅದು ಆಧ್ಯಾತ್ಮಿಕ ಸಾಕ್ಷಾತ್ಕಾರವೆಂಬುದನ್ನು ನಿಮ್ಮ ಜೀವನದಲ್ಲಿ ತೋರಿ. ಯಾರು ಇದನ್ನು ಅನುಭವಿಸುವರೊ, ಅವರು ಮಾತ್ರ ಇದನ್ನು ತಿಳಿದುಕೊಳ್ಳಬಲ್ಲರು. ಯಾರಲ್ಲಿ ಆಧ್ಯಾತ್ಮಿಕತೆ ಇದೆಯೊ ಅವರು ಮಾತ್ರ ಮತ್ತೊಬ್ಬರಿಗೆ ಇದನ್ನು ಕೊಡಬಲ್ಲರು, ಮಾನವ ಕೋಟಿಯ ಮಹಾಗುರುಗಳಾಗಬಲ್ಲರು, ಅವರೇ ಜ್ಞಾನಶಕ್ತಿ."**

ಇಂದು ದೇಶದಲ್ಲಿ ಇಂತಹ ಮಹಾತ್ಮರು ಹೆಚ್ಚಿದಷ್ಟೂ ಆ ದೇಶದ ಗೌರವ ಹೆಚ್ಚುವುದು. ಯಾವ ದೇಶದಲ್ಲಿ ಇಂತಹ ಮಹಾತ್ಮರು ಇಲ್ಲವೇ ಇಲ್ಲವೋ ಆ ದೇಶ ನಾಶವಾದಂತೆ. ಯಾವ ಶಕ್ತಿಯೂ ಅದನ್ನು ಸಂರಕ್ಷಿಸಲಾರದು. ಆದಕಾರಣ ಮಾನವಕೋಟಿಗೆ ನನ್ನ ಗುರುದೇವನ ಸಂದೇಶ "ಆಧ್ಯಾತ್ಮಿಕ ಸತ್ಯವನ್ನು ನೀವೇ ಸಾಕ್ಷಾತ್ಕಾರ ಮಾಡಿಕೊಳ್ಳಿ" ಎಂಬುದು. ನಿಮ್ಮ ಸಹೋದರರಿಗಾಗಿ ತ್ಯಾಗ ಮಾಡಿ ಎಂದು ಅವರು ನಮಗೆ ಹೇಳುತ್ತಿದ್ದರು. "ನಿಮ್ಮ ಸಹೋದರರಿಗಾಗಿ ಪ್ರೀತಿಯನ್ನು ತೋರುವೆವು ಎಂದು ಮಾತನಾಡುವುದನ್ನು ನಿಲ್ಲಿಸಿ. ನಿಮ್ಮ ಮಾತನ್ನು ಸಮರ್ಥಿಸಲು ಕೆಲಸದಲ್ಲಿ ನಿರತರಾಗಿ" ಎನ್ನುತ್ತಿದ್ದರು. ತ್ಯಾಗದ ಸಮಯ ಬಂದಿದೆ. ಸಾಕ್ಷಾತ್ಕಾರಕ್ಕೆ ಸಮಯ ಬಂದಿದೆ. ಸಾಕ್ಷಾತ್ಕಾರವಾದಾಗ ವಿಶ್ವದ ಧರ್ಮಗಳಲ್ಲೆಲ್ಲಾ ಒಂದು ಸಾಮರಸ್ಯವನ್ನು ನೋಡುವಿರಿ. ವೈಮನಸ್ಯಕ್ಕೆ ಕಾರಣವಿಲ್ಲವೆಂದು ಆಗ ಗೊತ್ತಾಗುವುದು. ಆಗ ಮಾತ್ರ ನೀವು ಮಾನವಕೋಟಿಗೆ ಸಹಾಯಮಾಡಲು ಸಿದ್ಧರಾಗುವಿರಿ. ಎಲ್ಲ ಧರ್ಮಗಳ ಅಂತರಾಳದಲ್ಲಿರುವ ಅತಿ ಮುಖ್ಯವಾದ ಏಕತೆಯನ್ನು ವಿವರಿಸುವುದೇ, ಅದನ್ನು ಜಗತ್ತಿಗೆ ಸಾರುವುದೆ, ನನ್ನ ಗುರುದೇವನ ಜೀವನ ಧ್ಯೇಯವಾಗಿತ್ತು. ಉಳಿದ ಗುರುಗಳು ತಮ್ಮ ಹೆಸರಿನಲ್ಲಿ ಬೇರೆ ಬೇರೆ ಧರ್ಮಗಳನ್ನು ಬೋಧಿಸಿದರು. ಆದರೆ ಇಪ್ಪತ್ತನೇ ಶತಮಾನದ ಈ ಮಹಾಪುರುಷ ಯಾವುದನ್ನೂ ತನ್ನದೆಂದು ಸಮರ್ಥಿಸಲಿಲ್ಲ. ಅವರು ಯಾವ ಧರ್ಮವನ್ನೂ ಅಲುಗಾಡಿಸಲು ಹೋಗಲಿಲ್ಲ. ಏಕೆಂದರೆ ವಾಸ್ತವವಾಗಿ ಎಲ್ಲಾ ಧರ್ಮಗಳೂ ಒಂದೇ ಸನಾತನ ತತ್ತ್ವದ ಹಲವು ಅವಿಭಾಜ್ಯ ಅಂಗಗಳು ಎಂಬುದು ಅವರ ಕಾಣ್ಕೆಯಾಗಿತ್ತು.